

# ಯೋಗಸಾಗರಿ ಸಂಧ್ಯಾ

## ಹಿರಿಯರಿಗೂ ಯೋಗ ಕಲಿಸುವ ಸಾಧಕಿ!

ಮಲೆನಾಡು ಭಾಗದ ಸಾಗರದಲ್ಲೊಂದು ಅಂತರರಾಷ್ಟ್ರೀಯ ಮಟ್ಟದ ಯೋಗಪ್ರತಿಭೆಯಿದೆ. ವಯಸ್ಸು ಕೇವಲ ಹದಿನೇಳು. ಯೋಗಾಸನದಲ್ಲಿ ಎತ್ತರದ ಶಿಖರ ಏರಿದ ಈ ಬಾಲಕಿ ಸಂಧ್ಯಾಗೆ, ಕ್ಲಿಷ್ಟಕರ ಆಸನಗಳು ಸಲೀಸು. ಈಕೆ ಆಸಕ್ತರಿಗೆ ಆಸನಗಳನ್ನೂ ಕಲಿಸುವ ಯೋಗಗುರುವೂ ಹೌದು.

■ ಎಂ.ಎಸ್. ಶೋಭಿತ್ ಮೂಡ್ಕಣಿ

ಈಕೆ ಇನ್ನೂ ಹದಿನೇಳರ ಪೋರಿ. ವಿಶೇಷ ಎಂದರೆ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಕೂಡ ಈಕೆಯನ್ನು ತಮ್ಮ ಶಿಕ್ಷಕಿ ಎಂದು ಪರಿಗಣಿಸಿ ಗೌರವಿಸುತ್ತಾರೆ. ಅಷ್ಟೇ ಅಲ್ಲ ಈಕೆಯ ಶಿಷ್ಯರಾಗಿ ಯೋಗ ಕಲಿಯಲು ಶಿರಸಿ, ಹೊಸನಗರ, ನಾಗರಕೋಡಿಗೆ... ಹೀಗೆ ದೂರ ದೂರದ ಊರುಗಳಿಂದಲೂ ಆಗಮಿಸುತ್ತಾರೆ.

ಯೋಗದಲ್ಲಿ ಇಷ್ಟು ಚಿಕ್ಕ ವಯಸ್ಸಿಗೇ ಅಸಾಧಾರಣ ಸಾಧನೆ ಮಾಡಿದ ಸಂಧ್ಯಾ ಎಂ.ಎಸ್. ೧೭ರ ಯೋಗ ಸಾಧಕಿ. ಈಗಾಗಲೇ 'ಯೋಗ ಗುರು' ಎಂಬ ಅಭಿದಾನಕ್ಕೂ ಪಾತ್ರಳಾಗಿದ್ದಾಳೆ. ತನಗಿಂತಲೂ ಹಿರಿಯ ಮತ್ತು ಕಿರಿಯ ಆಸಕ್ತರಿಗೆ ಯೋಗಾಸನ ಕಲಿಸುತ್ತಿದ್ದಾಳೆ. ಬಡತನದ ಹಿನ್ನೆಲೆಯಿಂದ ಬರುವ ವಿದ್ಯಾರ್ಥಿಗಳಿಗೆ ಯೋಗವನ್ನು ಕಲಿಸುವ ಉದ್ದೇಶದಿಂದ ಸಾಗರದಲ್ಲಿ 'ಶ್ರೀ ಗುರುಕುಲಂ ಯೋಗ ಕೇಂದ್ರ' ಆರಂಭಿಸಿದ್ದಾಳೆ. ಆ ಮೂಲಕ ಅತ್ಯಂತ ಕಿರಿಯ 'ಯೋಗ ಗುರು' ಎಂಬ ಅಗ್ಗಳಿಕೆಯೂ ಈಕೆಯ ಬೆನ್ನಿಗಿದೆ. ರಾಜ್ಯ, ರಾಷ್ಟ್ರಮಟ್ಟದ ಅನೇಕ ಯೋಗ ಪ್ರಶಸ್ತಿಗಳಿಗೆ ಭಾಜನಳಾಗಿದ್ದಾಳೆ. ಇನ್ನೂ ವಿಶೇಷವೆಂದರೆ ಈಕೆಯ ಬಳಿ ಯೋಗ ಕಲಿತ ಶಿಷ್ಯರು ಕೂಡ ಇಂದು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಛಾಪು ಮೂಡಿಸುತ್ತಿದ್ದಾರೆ. ಗುರುವಿಗೆ ತಕ್ಕ ಶಿಷ್ಯರಾಗಿ ಮಿಂಚುತ್ತಿರುವುದು ಸಂಧ್ಯಾಗೆ ಹೆಮ್ಮೆಯ ಸಂಗತಿಯೂ ಹೌದು.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಕಾನುಗೋಡು ಮೂಲದ ಕೃಷಿಕ, ನ್ಯಾಯವಾದಿ ಶ್ರೀಧರ ಮೂರ್ತಿ ಮತ್ತು ಸುಧಾ ದಂಪತಿಯ ಕಿರಿಯ ಪುತ್ರಿ ಸಂಧ್ಯಾ. ಪುಟ್ಟ ವಯಸ್ಸಿನಲ್ಲೇ ಯಶಸ್ಸಿನ ಮೆಟ್ಟಿಲೇರಿ ಇದೀಗ ಅತಿ ಎತ್ತರಕ್ಕೆ ಏರಿದ್ದಾಳೆ.

### ಬಡತನದಲ್ಲಿ ಬೆಳಗಿದ ಪ್ರತಿಭೆ

ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವ ಸಂಧ್ಯಾ, ಬಡತನದ ಕುಟುಂಬದಿಂದ ಬಂದವರು. ಜೀವನದಲ್ಲಿ ಎದುರಾದ ಎಲ್ಲಾ ಸವಾಲುಗಳನ್ನು